# ದೊಡ್ಡಪ್ಪ ಎಂದೆ, ಮಗಳೇ ಎಂದರು



## ಅರ್ಚನಾ ಉಡುಪ ಕಂಡಂತೆ ನಾದಲೋಲ

**ಎಸ್‌ಪಿಬಿ ಅವರೊಂದಿಗೆ ವೇದಿಕೆ ಹಂಚಿಕೊಂಡಿದ್ದ, ಗಾನ ಗಾರುಡಿಗನಿಂದ 'ಮಗಳೇ' ಎಂದು ಕರೆಸಿಕೊಳ್ಳುತ್ತಿದ್ದ ಕನ್ನಡದ ಖ್ಯಾತ ಗಾಯಕಿ ಅರ್ಚನಾ ಉಡುಪ, 'ದೊಡ್ಡಪ್ಪ'ನೊಂದಿಗಿನ ತಮ್ಮ ಮರೆಯಲಾಗದ ನಂಟು – ಆಪ್ತ ಕ್ಷಣಗಳನ್ನು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.**

■ ನಿರೂಪಣೆ: **ಉಮಾ ವೇಣೂರು**

ಇಪ್ಪತ್ತು ವರ್ಷಗಳಿಗೂ ಹಿಂದಿನ ಮಾತು. ಖ್ಯಾತ ಸುಗಮಸಂಗೀತಗಾರರಾಗಿದ್ದ ಜಿ.ವಿ. ಅತ್ರಿ ಅವರ ಆಲ್ಬಂ ಒಂದಕ್ಕೆ ಬೇಂದ್ರೆ ಅವರ ಹಾಡು ಹಾಡಿದ್ದೆ. ಇದೇ ಆಲ್ಬಂಗೆ ಎಸ್‌ಪಿಬಿ ಅವರೂ ಒಂದು ಹಾಡು ಹಾಡಿದ್ರು. ಕ್ಯಾಸೆಟ್ ಬಂದಾದ ಮೇಲೆ ಅವರು ನನ್ನ ಹಾಡು ಕೇಳಿದ್ರು. ಬಹಳ ಇಷ್ಟಪಟ್ಟಿದ್ರು. ಬೆಂಗಳೂರಿನಲ್ಲಿ ಓಬಯ್ಯ ಅಂತ ಒಬ್ಬರು ನಮ್ಮ ಕುಟುಂಬಕ್ಕೆ ಆಪ್ತ ಸ್ನೇಹಿತರಿದ್ದಾರೆ. ಅವರು ಬಾಲು ಅವರಿಗೂ ಅತ್ಯಂತ ಆಪ್ತರು. ಎಸ್‌ಪಿಬಿ ಬೆಂಗಳೂರಿಗೆ ಬಂದಾಗೆಲ್ಲ ಅವರ ಮನೆಯಲ್ಲೇ ಊಟ, ವಸತಿ ಎಲ್ಲವೂ. ಒಮ್ಮೆ ಓಬಯ್ಯ ಅವರ ಮನೆಗೆ ನಾನು ಹೋಗಿದ್ದೆ. ಆಗ ಬಾಲು ಅವರ ಬಳಿ ಮಾತಾಡು ಎಂದು ಓಬಯ್ಯ ಅವರು ನನಗೆ ಫೋನ್ ಮಾಡಿಕೊಟ್ರು. ಅವರ ಬಳಿ ಮೊದಲ ಬಾರಿಗೆ ಮಾತಾಡಿದೆ. 'ನೀನು ತುಂಬ ಚೆನ್ನಾಗಿ ಹಾಡ್ತೀಯಮ್ಮ' ಎಂದಿದ್ರು. ಆಗ ತುಂಬ ಖುಷಿಯಾಯ್ತು.

'ಎದೆತುಂಬಿ ಹಾಡಿದೆನು' ರಿಯಾಲಿಟಿ ಶೋಗೆ ರಾಮೋಜಿ ಫಿಲ್ಮ್ ಸಿಟಿಯಲ್ಲಿ ರೆಕಾರ್ಡಿಂಗ್‌ನಲ್ಲಿ ಅವರೊಂದಿಗೆ ಭಾಗವಹಿಸಿದ್ದೆ. ಆಗಲೂ ಆತ್ಮೀಯವಾಗಿಯೇ ಮಾತನಾಡಿಸಿದ್ದರು. ಬಹಳ ಸರಳ ವ್ಯಕ್ತಿತ್ವ. ಎಲ್ಲರೊಂದಿಗೆ ಪ್ರೀತಿಯಿಂದ ಬೆರೆಯೋರು. ಒಮ್ಮೆ ಹುಬ್ಬಳ್ಳಿಯಲ್ಲಿ ಒಂದು ಕಾರ್ಯಕ್ರಮ ಇತ್ತು. ಅಲ್ಲಿ ಹೋದಾಗ ಬ್ಯಾಕ್‌ಸ್ಟೇಜ್‌ನಲ್ಲಿ ಅಕ್ಕಪಕ್ಕ ಕುಳಿತು ಬಹಳ ಹೊತ್ತು ಮಾತಾಡಿದ್ವಿ. ನನಗೆ ಅವರ ಪ್ರೀತಿ, ಸ್ನೇಹಶೀಲ ಗುಣ, ವಾತ್ಸಲ್ಯ ನೋಡಿ ಏನು ತೋಚಿತೋ ಗೊತ್ತಿಲ್ಲ, 'ನಾನು ನಿಮ್ಮನ್ನು ದೊಡ್ಡಪ್ಪ ಎಂದು ಕರೆಯಲೇ' ಎಂದು ಕೇಳಿದೆ. ಆಗ ಅವರು ಹೇಳಿದ್ದು ಒಂದೇ ಮಾತು: 'ನೀನು ಸರಿಯಾದ ತಂತಿಯನ್ನೇ ಮೀಟಿದ್ದಿಯಾ...' ಅಂದಿನಿಂದ ಇಂದಿನವರೆಗೂ ಅವರನ್ನು ನಾನು ದೊಡ್ಡಪ್ಪ ಎಂದೇ ಕರೆಯುತ್ತಿದ್ದುದು, ಅವರು ನನ್ನನ್ನು 'ಮಗಳೇ' ಎಂದೇ ಕರೆಯುತ್ತಿದ್ದುದು.

ನಾನು ಸಂಗೀತ ಬದುಕಿನಲ್ಲಿ ಹಲವಾರು ಲೆಜೆಂಡರಿ ಗಾಯಕರೊಂದಿಗೆ ಹಾಡಿದ್ದೇನೆ. ಬೇರೆಯವರ ಜೊತೆಗೆ ಹಾಡುವಾಗ ಒಂದು ರೀತಿಯ ಸ್ಟ್ರೆಸ್, ಟೆನ್ಶನ್ ಇರ್ತಿತ್ತು. ಆದರೆ ದೊಡ್ಡಪ್ಪನ ಜೊತೆಗೆ ಹಾಡುವಾಗ ಒಂದೇ ಒಂದು ಸಲ ಯಾವುದೇ ಒತ್ತಡ ಅನಿಸಲಿಲ್ಲ. ಒಳ್ಳೆಯ ಸ್ನೇಹಿತನ ಜೊತೆ ಹಾಡ್ತಾ ಇದ್ದೇನೆ ಅನ್ನೋ ಭಾವನೆಯನ್ನು ಅವರು ಉಂಟುಮಾಡುತ್ತಿದ್ದರು. ಹಾಡುವಾಗ ಮುಕ್ತವಾದ ವಾತಾವರಣ ಕ್ರಿಯೇಟ್ ಮಾಡೋರು. ಕೀಟಲೆ ಮಾಡೋರು, ತಮಾಷೆ ಮಾಡೋರು. ಒಮ್ಮೆ 'ಇದು ಯಾವ ಸೀಮೆ ಗಂಡು ಕಾಣಮ್ಮೋ...' ಹಾಡು ಹಾಡ್ತಾ ಇದ್ದೆವು. ಆಗ ಕೀಟಲೆ ತಮಾಷೆ ನಡೀತಾ ಇತ್ತು. 'ನಗುವ ನಯನ, ಮಧುರ ಮೌನ...' ಹಾಡುವಾಗ ಮೈಕ್ ತಗೊಂಡು ನನ್ನ ತಲೆಗೆ ಕುಟ್ತಾ ಇದ್ರು. ಹಾಗೇ ನಾನೂ ಕೂಡ. ಅವರು ಸ್ಟೇಜ್ ಮೇಲೆ ಹಾಡ್ತಾ ಇದ್ದಾಗ ಸ್ಟೇಜ್ ಹಿಂದೆ ಕುಳಿತು ಸೀಟಿ ಹೊಡೀತಾ ಇದ್ದೆ. ಒಮ್ಮೆಯೂ ಕೋಪ ಮಾಡಿಕೊಂಡವರಲ್ಲ. ಸಹನೆ, ತಾಳ್ಮೆಯ ಸಾಕಾರಮೂರ್ತಿ ಅವರು. ಅವರಲ್ಲಿನ ಶ್ರದ್ಧೆ, ನಡವಳಿಕೆ, ಸ್ವಭಾವ ಇವನ್ನೆಲ್ಲ ವರ್ಣಿಸಲು ನನ್ನ ಬಳಿ ಪದಗಳೇ ಇಲ್ಲ.

ಅವರಿಗೆ ಕ್ಯಾರೆಟ್ ಹಲ್ವ ಅಂದ್ರೆ ಬಹಳ ಇಷ್ಟ. ಒಂದೆರಡು ಬಾರಿ ಹಲ್ವ ಮಾಡಿಕೊಟ್ಟಿದ್ದೆ.